33407/2000ನ್ನು ದಾಖಲಿಸಿದ್ದರು. ಆದರೆ ನ್ಯಾಯಾಲಯವು ದಿನಾಂಕ: 7–10–2002ರಂದು ರಿಟ್ ಅರ್ಜಿಯನ್ನು ವಜಾಗೊಳಿಸಿ ನಗರಸಭೆಯು ನೀಡಿರುವ ನಿರ್ದೇಶನವನ್ನು ಪಾಲಿಸುವಂತೆ ಸೂಚಿಸಿತ್ತು.

ಈ ಮಧ್ಯೆ ಅರ್ಜಿದಾರರು ಕಟ್ಟಡ ನಕ್ಷೆಯ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಿದ್ದ ಮೇಲ್ಮನವಿಯನ್ನು ಸರ್ಕಾರಕ್ಕೆ ಆದೇಶ ಸಂಖ್ಯೆ: ನಅಇ 700 ಜಿಇಎಲ್ 2002 ದಿನಾಂಕ: 9–8–2004ರಂದು ವಜಾಗೊಳಿಸಿ ಅರ್ಜಿದಾರರ ಮನವಿಯನ್ನು ಹಾಲಿ ಇರುವ ಸೂತ್ರಗಳ ಅನುಸಾರ ಪರಿಗಣಿಸುವಂತೆ ಆದೇಶಿಸಲಾಗಿತ್ತು. ಆದರೆ ಉಡುಪಿ ನಗರಸಭೆಯು ಸರ್ಕಾರದ ಆದೇಶವನ್ನು ತಿರುಚಿ ಏಕಪಕ್ಷೀಯವಾಗಿ ಕ್ರಮ ಕೈಗೊಂಡು ಅರ್ಜಿದಾರರು ನಿರ್ಮಿಸಿರುವ ಕಟ್ಟಡವನ್ನು ಸಕ್ರಮಗೊಳಿಸಿರುತ್ತಾರೆ.

ಆ) ಇಲ್ಲ.

ಇ) ಬಂದಿದೆ.

ಈ) ಸರ್ಕಾರದ ಆದೇಶವನ್ನು ತಿರುಚಿ ಉಡುಪಿ ನಗರ ಸಭೆಯು ಏಕಪಕ್ಷೀಯವಾಗಿ ಶ್ರೀಮತಿ ಕೆ. ಶಾಂಭವಿ ಇವರು ನಿರ್ಮಿಸಿರುವ ಅಕ್ರಮ ಕಟ್ಟಡವನ್ನು ಸಕ್ರಮಗೊಳಿಸಿ ಕ್ರಮ ತೆಗೆದುಕೊಂಡ ಬಗ್ಗೆ ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಪತ್ರ ಸಂ.ನಅಇ 482 ಜಿಇಎಲ್ 2004 ದಿನಾಂಕ: 14–2–2006ರಲ್ಲಿ ಜಿಲ್ಲಾಧಿಕಾರಿಗಳು, ಉಡುಪಿ ಇವರಿಗೆ ಸೂಚಿಸಲಾಗಿದೆ. ಈ ಬಗ್ಗೆ ಪ್ರಸ್ತಾವನೆ ಬಂದ ತಕ್ಷಣ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

698(720) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರಿನಲ್ಲಿ ಅಗ್ನಿಶಾಮಕ ದಳ ಕಚೇರಿ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದ್ದರೆ ಇದನ್ನು ಯಾವಾಗ ತೆರೆಯಲಾಗುವುದು.

ಶ್ರೀ ಎಂ.ಪಿ. ಪ್ರಕಾಶ್ ಗೃಹ ಮತ್ತು ಕಾನೂನು ಸಂಸದೀಯ ಸಚಿವರು) :

ಅ) ಹೌದು.

ಆ) ಅಗ್ನಿಶಾಮಕ ಠಾಣೆಯನ್ನು ತೆರೆಯಲು ಈ ಠಾಣೆಗೆ ಬೇಕಾದ ಅವಶ್ಯ ಸಿಬ್ಬಂದಿ ಮತ್ತು ಉಪಕರಣಗಳಿಗೆ ಸಹಮತಿ ನೀಡುವಂತೆ ಕೋರಿ ಈಗಾಗಲೇ ಪ್ರಸ್ತಾವನೆಯು ಆರ್ಥಿಕ ಇಲಾಖೆಯೊಡನೆ ಸಮಾಲೋಚನೆಯಲ್ಲಿದ್ದು, ಆರ್ಥಿಕ ಇಲಾಖೆಯ ಸಹಮತಿ ದೊರೆತ ಕೂಡಲೇ ಇದನ್ನು ಪ್ರಾರಂಭಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.